ನಿಮ್ಮೊಡನೆ

# ಎಸ್‌ಎಸ್‌ಎಲ್‌ಸಿ ಫಲಿತಾಂಶದ ವಿಶ್ಲೇಷಣೆ ಭಾವದಾರಿದ್ರ್ಯದ ಅನಾರೋಗ್ಯಕರ ಸಂಕೇತ

ಎಸ್‌ಎಸ್‌ಎಲ್‌ಸಿ ಫಲಿತಾಂಶದ ಯಶಸ್ಸಿನ ಹಿಂದೆ ಯೋಚನೆ, ಕ್ರಿಯಾಯೋಜನೆ ಮತ್ತು ಅವುಗಳನ್ನು ಕ್ರಿಯೆಗಿಳಿಸುವಲ್ಲಿನ ಬದ್ಧತೆ ಮುಖ್ಯವಾಗುತ್ತವೆ. ಈ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸುವುದನ್ನು ಬಿಟ್ಟು, ಇಬ್ಬರು ಮಹಿಳೆಯರನ್ನು ಎರಡು ತುದಿಗಳಲ್ಲಿ ನಿಲ್ಲಿಸಿ, ಕೀರ್ತಿಯ ಕಿರೀಟ ಯಾರ ತಲೆಗಿಡಬೇಕು ಎಂಬುದರ ಸುತ್ತ ಚರ್ಚೆಗಳು ಗಿರಕಿ ಹೊಡೆಯುತ್ತಿರುವುದು ವಿಪರ್ಯಾಸ.



ಈಶ್ವರ

ನಮ್ಮ ಆಲೋಚನಾ ಕ್ರಮ ಹೇಗಿದೆ ಎಂಬುದಕ್ಕೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಮತ್ತು ಹಾಸನ ಜಿಲ್ಲೆಯ ವಿದ್ಯಮಾನ ಒಂದು ಒಳ್ಳೆಯ ನಿದರ್ಶನ. ಜಿಲ್ಲಾ ರ‍್ಯಾಂಕಿಂಗ್ ಪಟ್ಟಿಯಲ್ಲಿ ಹಾಸನ ಈ ಸಲ ಮೊದಲ ಸ್ಥಾನಕ್ಕೆ ಏರಿದೆ. ಈ ನಂಬರ್ ಗೇಮ್‌ಗೆ ಕಿಮ್ಮತ್ತು ಕೊಡಬೇಕೋ ಬೇಡವೋ ಎಂಬುದು ಬೇರೆ ವಿಚಾರ. ಅದನ್ನು ಈ ಚರ್ಚೆಯ ವ್ಯಾಪ್ತಿಯಿಂದ ಹೊರಗಿಟ್ಟು ನೋಡಿದರೂ ಕಳೆದ ಸಲ ಏಳನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಸಲ ಮೊದಲ ಸ್ಥಾನಕ್ಕೆ ಜಿಗಿದಿದೆ ಎಂಬುದು ಕುತೂಹಲದ ಸಂಗತಿ. ಈ ಜಿಗಿತದ ಹಿಂದೆ ಇದ್ದಿರಬಹುದಾದ ಕಸರತ್ತು ಮತ್ತು ಶ್ರಮ ಗುರುತಿಸುವುದು ಜಟಿಲ ಕೆಲಸ. ಆದರೆ, ಇಂತಹ ಸಂಕೀರ್ಣ ಪ್ರಕ್ರಿಯೆಯನ್ನು ಹೀಗೂ ನೋಡಬಹುದೇ ಎಂಬಷ್ಟು ಸರಳೀಕೃತಗೊಳಿಸಿರುವುದು ನಮ್ಮ ಸಮಕಾಲೀನ ಸಮಾಜದ ಮನಸ್ಥಿತಿಗೆ ಕನ್ನಡಿ ಹಿಡಿಯುವಂತಿದೆ.

ಈ ಸಾಧನೆಗೆ ಕಾರಣವಾದ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸುವುದು ಯುಕ್ತವಾದ ಕ್ರಮ. ಇತರರು ಅನುಸರಿಸಲು ಬೇಕಾದ ಹೊಳಹುಗಳು ಅಲ್ಲಿ ಸಿಗಬಹುದು. ಆದರೆ ಆ ಕಡೆ ಕಣ್ಣೆತ್ತಿಯೂ ನೋಡದೆ, ಸಾಧನೆಯ ಶ್ರೇಯವನ್ನು ಯಾರದೋ ಒಬ್ಬರ ಮುಡಿಗೇರಿಸಲು ನಡೆದಿರುವ ಪೈಪೋಟಿಯು ನಮ್ಮ ಭಾವದಾರಿದ್ರ್ಯವನ್ನು ಎತ್ತಿತೋರಿಸುತ್ತಿದೆ.

ಈ ಫಲಿತಾಂಶದ ಹಿಂದೆ ವಿದ್ಯಾರ್ಥಿಗಳು, ಶಿಕ್ಷಕರ ಅಪಾರ ಶ್ರಮ ಅಡಗಿದೆ. ಪೋಷಕರ ತ್ಯಾಗ–ಸಹಕಾರ ಪೂರಕವಾಗಿ ಕೆಲಸ ಮಾಡಿರುತ್ತದೆ. ಶಾಲಾ ಆಡಳಿತ ಮಂಡಳಿಗಳು, ಜಿಲ್ಲಾ ಪಂಚಾಯಿತಿ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿವರ್ಗ, ಚುನಾಯಿತ ಪ್ರತಿನಿಧಿಗಳು... ಇವರೆಲ್ಲರ ಸಲಹೆ–ಸೂಚನೆಗಳ ಪಾತ್ರ ಕಿಂಚಿತ್ತಾದರೂ ಇದ್ದಿರಲೇಬೇಕು. ಯೋಚನೆ, ಕ್ರಿಯಾಯೋಜನೆ ಮತ್ತು ಅವುಗಳನ್ನು ಕ್ರಿಯೆಗಿಳಿಸುವಲ್ಲಿನ ಬದ್ಧತೆ... ಎಲ್ಲವೂ ಮುಖ್ಯವಾಗುತ್ತವೆ. ಈ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸುವುದನ್ನು ಬಿಟ್ಟು, ಇಬ್ಬರು ಮಹಿಳೆಯರನ್ನು ಎರಡು ತುದಿಗಳಲ್ಲಿ ನಿಲ್ಲಿಸಿ, ಕೀರ್ತಿಯ ಕಿರೀಟ ಯಾರ ತಲೆಗಿಡಬೇಕು ಎಂಬುದರ ಸುತ್ತ ಚರ್ಚೆಗಳು ಗಿರಕಿ ಹೊಡೆಯುತ್ತಿರುವುದು ವಿಪರ್ಯಾಸ.

ಅಧಿಕಾರಿಗಳನ್ನು ಹೀರೊಗಳಾಗಿಸುವುದೆಂದರೆ ಮಾಧ್ಯಮಗಳಿಗೆ ಹಿಗ್ಗೋ ಹಿಗ್ಗು. ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಗೊಳ್ಳುತ್ತಲೇ ಹಾಸನ ಜಿಲ್ಲೆಯ ಸಾಧನೆಯ ಶ್ರೇಯವನ್ನು ರೋಹಿಣಿ ಸಿಂಧೂರಿ ಅವರ ಮುಡಿಗೇರಿಸುವ ಧಾವಂತ ನಡೆಯಿತು. ಅವರು ಹಾಸನದ ಜಿಲ್ಲಾಧಿಕಾರಿಯಾಗಿದ್ದವರು. ಈ ಸಾಧನೆಗೆ ಅವರಿಂದ ಪ್ರೇರಣೆ ಸಿಕ್ಕಿರಬಹುದು. ಆದರೆ ಅದಕ್ಕೆ ಪವಾಡದ ಪ್ರಭಾವಳಿ ಸೃಷ್ಟಿಸುವುದು ತರವಲ್ಲ. ಮೇಲಾಗಿ ಶಿಕ್ಷಣವು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಅದೊಂದು ಸ್ಥಳೀಯ ಸರ್ಕಾರ. ಅಲ್ಲಿ ಅಧ್ಯಕ್ಷರಿರುತ್ತಾರೆ. ಒಬ್ಬ ಸಿ.ಇ.ಒ. ಇರುತ್ತಾರೆ ಎಂಬಿತ್ಯಾದಿ ಅಂಶಗಳು ಇಲ್ಲಿ ಗಣನೆಗೆ ಬರಬೇಕಲ್ಲವೇ?

ರೋಹಿಣಿ ಹೆಸರು ಮಾಧ್ಯಮಗಳಲ್ಲಿ ರಾರಾಜಿಸುವಷ್ಟರಲ್ಲಿ ಜಿಲ್ಲೆಯ ಪ್ರಭಾವಿ ರಾಜಕಾರಣಿಯಾದ ಸಚಿವ ಎಚ್.ಡಿ. ರೇವಣ್ಣ ಎದ್ದುನಿಂತರು. ಇದರಲ್ಲಿ ರೋಹಿಣಿ ಅವರ ಪಾತ್ರ ಏನೇನೂ ಇಲ್ಲ. ತಮ್ಮ ಪತ್ನಿ ಭವಾನಿ ಅವರ ಶ್ರಮದಿಂದಾಗಿ ಇದು ಸಾಧ್ಯವಾಗಿದೆ ಎಂದು ಬಹಿರಂಗವಾಗಿಯೇ ಸಾರಿದರು. ಅಲ್ಲಿಗೆ, ಯಶಸ್ಸಿಗೆ ಇನ್ನೊಬ್ಬರು ಅಮ್ಮ ಹುಟ್ಟಿಕೊಂಡರು. ಭವಾನಿ ಅವರು ಅಲ್ಲಿನ ಜಿಲ್ಲಾ ಪಂಚಾಯಿತಿಯ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷೆ. 'ಅಧಿಕಾರಿಗಳ ಜೊತೆ ಮೀಟಿಂಗ್, ಪೋಷಕರ ಸಭೆ...' ಎಂದು ಈ ಸಾಧನೆಗೆ ಕೈಗೊಂಡ ಕೆಲವೊಂದು ಉಪಕ್ರಮಗಳನ್ನು ಭವಾನಿ ವಿವರಿಸಿದ್ದಾರೆ.

ಆದರೆ ಇಲ್ಲಿ ಸಹಜವಾಗಿಯೇ ಕೆಲವೊಂದು ಪ್ರಶ್ನೆಗಳು ಏಳುತ್ತವೆ. ಇಷ್ಟರಿಂದಲೇ ಆ ಪರಿ ಸುಧಾರಣೆ ಸಾಧ್ಯವೇ ಎಂಬುದು ಮೊದಲ ಪ್ರಶ್ನೆ. ಎರಡನೆಯದಾಗಿ, ಸ್ಥಾಯಿ ಸಮಿತಿಯೊಂದರ ಅಧ್ಯಕ್ಷರು ತುಸು ಮುತುವರ್ಜಿ ವಹಿಸಿದ ಮಾತ್ರಕ್ಕೆ ಇಡೀ ಜಿಲ್ಲೆಯ ಫಲಿತಾಂಶಕ್ಕೇ ಹೀಗೆ ತಿರುವು ಸಿಗಬಹುದೇ? ಹಾಗಿದ್ದರೆ, ಬೇರೆ ಜಿಲ್ಲೆಗಳ ಜಿ.ಪಂ. ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಿಂದ ಏಕೆ ಅದು ಸಾಧ್ಯವಾಗಿಲ್ಲ?

ಫಲಿತಾಂಶ ಪ್ರಮಾಣ ಏರಿರುವುದರ ಹಿಂದೆ ಕೆಲಸ ಮಾಡಿರಬಹುದಾದ ಅಂಶಗಳನ್ನು ಸರಿಯಾಗಿ ಗ್ರಹಿಸುವುದು ಮತ್ತು ಗುರುತಿಸುವುದು ಇಲ್ಲಿ ಮುಖ್ಯವಾಗಬೇಕು. ಬೋಧನೆ, ಅಭ್ಯಾಸ ಕ್ರಮಗಳನ್ನು ಮರುನಿರೂಪಿಸಿಕೊಂಡ ಬಗೆ, ಅದಕ್ಕಾಗಿ ರೂಪಿಸಿದ ನೀಲನಕಾಶೆ, ಮಕ್ಕಳಲ್ಲಿ ಕಲಿಕೆಯ ಖುಷಿ ಹೆಚ್ಚಿಸಲು ಕೈಗೊಂಡ ಉಪಕ್ರಮಗಳು, ಸರ್ಕಾರಿ ಶಾಲೆ ಮತ್ತು ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಹಿನ್ನೆಲೆ, ಶೇಕಡಾವಾರು ಪ್ರಮಾಣ ಮತ್ತು ಫಲಿತಾಂಶದ ತುಲನಾತ್ಮಕ ಅಧ್ಯಯನ, ಒಂದು ನಿರ್ದಿಷ್ಟ ಜಿಲ್ಲೆಗೆ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಭೌಗೋಳಿಕವಾಗಿ ಇದ್ದಿರಬಹುದಾದ ಅನುಕೂಲಗಳು... ಇವೆಲ್ಲವೂ ವಿಶ್ಲೇಷಣೆಗೆ ಒಳಗಾಗಬೇಕು. ವ್ಯಕ್ತಿ ನೆಲೆಯ ಹಿರಿಮೆಯ ಸುತ್ತ ಹೊರಳಾಡುವುದೆಂದರೆ ಶಿಕ್ಷಣ–ಫಲಿತಾಂಶದಂತಹ ಪರಿಕಲ್ಪನೆಗಳ ಅರ್ಥಗಳನ್ನೇ ಸಂಕುಚಿಗೊಳಿಸುವುದು ಎಂದು ಅರ್ಥ.

■ ಎನ್. ಉದಯಕುಮಾರ್